# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.32-2011** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ನಂಜಯ್ಯ<br>ನಂಜೀಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 05-07-2024. |

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಕೆ.ಟಿ.ಆರ್ ವಕೀಲರಿಂದಃ**

ನನ್ನ ಹೆಸರು ಮತ್ತು ನನ್ನ ತಂದೆ ಹೆಸರು ನಂಜಯ್ಯ ಎಂದರೆ ಸರಿ. ನಾನ ಎಸ್.ಎಸ್.ಎಲ್.ಸಿ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ಸರ್ಕಾರದಿಂದ ಮಂಜೂರು ಆದ ಸ್ವತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ.1 ರ ಸರ್ವೆ ನಂ.139 ಅನ್ನು ವಾದಿ ಮತ್ತು ನನ್ನ ತಂದೆ ನಂಜಯ್ಯನವರು ಸೇರಿ ದಿ.13-11-1964 ರಂದು ಮರಿಸ್ವಾಮಪ್ಪ ಎಂಬುವವರಿಗೆ ನೋಂದಣಿ ಕ್ರಯ ಪತ್ರ ಮುಖೇನ ಮಾರಾಟ ಮಾಡಿದ್ದರು ಎಂದರೆ ಸರಿ. ಅದೇ ರೀತಿ ನನ್ನ ತಂದೆ ಮತ್ತು ವಾದಿಯವರ ಸೇರಿ ದಿ.28-10-1974 ರಂದು ಮಹದೇವಪ್ಪ ಎಂಬುವವರಿಗೆ ನೋಂದಣಿ ಕ್ರಯ ಪತ್ರ ಮುಖೇನ ಮಾರಾಟ ಮಾಡಿದ್ದರು ಎಂದರೆ ಸರಿ. ನಾನು ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವರಾದ ಕಾರಣ ಮೈಸೂರು ಜಿಲ್ಲಾಧಿಕಾರಿಗಳು ಆ ರೀತಿ ಮಾರಾಟ ಮಾಡಲು ಸಾಧ್ಯವಿಲ್ಲ ಎಂದು ಸದರಿ ಜಮೀನನ್ನು ನಮಗೆ ಹಿಂದಿರುಗಿಸುವಂತೆ ಆದೇಶ ಮಾಡಿರುತ್ತಾರೆ ಎಂದರೆ ಸರಿ.

2. ನನ್ನ ತಂದೆ ಮತ್ತು ವಾದಿಯವರಿಗೆ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿ. ನನ್ನ ಮತತಲು ವಾದಿಯವರ ಹೆಸರಿನಲ್ಲಿ ದಾವಾ ಷೆಡ್ಯೂಲ್ ಸ್ವತ್ತುಗಳ ಜಂಟಿ ಖಾತೆ ಇತ್ತು ಎಂದರೆ

ಸರಿಯಲ್ಲ. ಸಾಕ್ಷಿ ಮುಂದವರೆದು ನನ್ನ ತಂದೆಯವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು 1992 ರಲ್ಲಿ ವಾದಿಯವರು ವಿಭಾಗಪತ್ರದ ಮುಖೇನ ತನ್ನ ಭಾಗದ ಸ್ವತ್ತನ್ನು ಪಡೆದುಕೊಂಡಿದ್ದು, ನಂತರ ಅವರ ಹೆಸರುಗಳಲ್ಲಿ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಒಂದೇ ಪಹಣಿ ಪತ್ರಿಕೆಯಲ್ಲಿ ವಾದಿ ಮತ್ತು ನನ್ನ ತಂದೆಯವರ ಹೆಸರು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಬೇರೆ ಪಹಣಿ ಇರುತ್ತದೆ ಎಂದು ನುಡಿಯುತ್ತಾರೆ. ಪಂಚಾಯ್ತಿ ವಿಭಾಗದ ಪ್ರಕಾರ ಸರ್ವೇ ನಂ.121 ರಲ್ಲಿ ವಾದಿಯವರಿಗೆ 2 ಎಕರೆ ಬಂದಿದ್ದು, ನನ್ನ ತಂದೆಯವರಿಗೆ 2 ಎಕರೆ ಸ್ವತ್ತು ಬಂದಿರುತ್ತದೆ, ಅದೇ ರೀತಿ ಸರ್ವೇ ನಂ.139 ರ ಪೂರ್ಣ ವಿಸ್ತೀರ್ಣದ ಸ್ವತ್ತು ನನ್ನ ತಂದೆಯವರಿಗೆ ಬಂದಿರುತ್ತೆ. ಹಾಗಾದರೆ ವಿಭಾಗ ಪತ್ರದಲ್ಲಿ ಅದೇ ರೀತಿ ಒಕ್ಕಣೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಿಡಿ–10 ವಿಭಾಗ ಪತ್ರವನ್ನು ನಂಜಯ್ಯ ಎಂಬುವವರು ನಂಜೇಪುರ ಗ್ರಾಮದಲ್ಲಿಯೇ ಬರೆದಿರುತ್ತಾರೆ. ಆ ಸಮಯ ನಿಡಿ–10 ಕ್ಕೆ ಶಿವಲಿಂಗಪ್ಪ, ಮಹದೇವಪ್ಪ, ಮಹದೇವಯ್ಯ, ಶಂಭುಲಿಂಗಪ್ಪನವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಿಡಿ–10 ಅನ್ನು ವಾದಿ ಮತ್ತು ಅವರ ಕುಟುಂಬದವರಿಗೆ ಭಾಗಾಂಶ ನೀಡುವುದನ್ನು ತಪ್ಪಿಸುವ ಉದ್ದೇಶದಿಂದ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

3. ನಂಜೇಪುರದಲ್ಲಿ ಇದ್ದ ಮನೆ ಮತ್ತು ಖಾಲಿ ಜಾಗವನ್ನು ನಾವುಗಳು ಮತ್ತು ವಾದಿಯ ಪತ್ನಿ ಮತ್ತು ಮಕ್ಕಳುಗಳು ಸೇರಿ ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂಜೇಪುರದಲ್ಲಿ ನಮಗೆ ಮತ್ತು ವಾದಿಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಖಾಲಿ ನಿವೇಶನ ಇದ್ದು, ಸದರಿ ನಿವೇಶನಗಳು ನಮಗೆ ಪ್ರತ್ಯೇಕ ಪ್ರತ್ಯೇಕವಾಗಿ ಮಂಜೂರು ಆಗಿದ್ದವು. ನಮ್ಮ ಮತ್ತು ವಾದಿಯ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಸ್ವತ್ತು ವಾದಿಯ ಪತ್ನಿಯಾದ ಮಹದೇವಮ್ಮ ರವರ ಹೆಸರಿನಲ್ಲಿ ಖಾತೆ ಇದ್ದು ನಾವುಗಳು ಮತ್ತು ವಾದಿಯ ಪತ್ನಿ ಮತ್ತು ಮಕ್ಕಳು ಜಯಲಕ್ಷ್ಮೀ ಮತ್ತು ರಮೇಶ್ ಎಂಬುವವರಿಗೆ ಮಾರಾಟ ಮಾಡಿ ಬಂದ ಹಣವನ್ನು ಹಂಚಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

4.ದಾವಾ 2 ನೇ ಐಟಂ ಸ್ವತ್ತಿನಲ್ಲಿ ತಲಾ 2 ಎಕರೆಯಂತೆ ವಾದಿ ಮತ್ತು ನನ್ನ ತಂದೆಯವರು ಹಂಚಿಕೊಂಡಿರುತ್ತಾರೆ ಎಂದು ತಿಳಿಸಿದ್ದು, ನಿಮಗೆ ಯಾವ ಕಡೆ ಭಾಗ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ನಮಗೆ ಉತ್ತರದ ಕಡೆ ಭಾಗ ಬಂದಿದ್ದು, ವಾದಿಗೆ ದಕ್ಷಿಣದ ಕಡೆ ಭಾಗ ಬಂದಿರುತ್ತದೆ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**